## ಇಲ್ಲಿಯವರೆಗೆ



ಅಪೂರ್ವ ಇತಿಹಾಸವಿರುವ ದೇಶ್ವಂತರ ಗುತ್ತಿನ ಮನೆ ಭವನವನ್ನು ಕೆಡಹುವ ಬಗ್ಗೆ ಚರ್ಚೆ ನಡೆಯುತ್ತದೆ. ಇದರಿಂದ ಸಹಜವಾಗಿಯೇ ದೇಶ್ವಂತರೂ ಸೇರಿದಂತೆ ಎಲ್ಲರಿಗೂ ಆತಂಕ ಮನೆ ಮಾಡುತ್ತದೆ. ಮನೆ ಕೆಡವಿ ವಾಣಿಜ್ಯ ಸಂಕೀರ್ಣ ಕಟ್ಟಿದರೆ ಮತ್ತೆ ತಾವಿರುವುದೆಲ್ಲಿ? ಹೀಗಾದರೆ ಪುರಾತನ ವಸ್ತುಗಳ ಗತಿಯೇನು? ಇವೇ ಮುಂತಾದ ಪ್ರಶ್ನೆಗಳು ಉದ್ಭವಿಸಿ ಎಲ್ಲರೂ ಚಿಂತೆಗೀಡಾಗುತ್ತಾರೆ. ಆನಂದನಿಗೆ ಹಲವು ಪತ್ರಕರ್ತ ಮಿತ್ರರಿದ್ದರು. ಅವರಲ್ಲೊಬ್ಬ ನಿಶಾಂತ ಪಾಟೀಲ. ಆತ ಧ್ಯೇಯನಿಷ್ಠ ಎಂಬ ಹೆಸರು ಗಳಿಸಿದ್ದ. ಯಾವುದನ್ನೂ ವೈಭವೀಕರಿಸಿ ಬರೆಯುತ್ತಿರಲಿಲ್ಲ. ಭವನದ ಬಗ್ಗೆ ಬರೆಯಲು ಪಾಟೀಲನನ್ನು ಕರೆಸುತ್ತಾನೆ. ದೇಶ್ವಂತರು ಅಂತರ್ಮುಖಿಯಾಗಿರುವುದು ಜಾಸ್ತಿಯಾಯಿತು. ಪುಸ್ತಕ ಓದುತ್ತಿರುವಾಗ, ಇದ್ದಕ್ಕಿದ್ದಂತೆ ಯಾವುದನ್ನೊ ಗಾಢವಾಗಿ ಚಿಂತಿಸುತ್ತಾ ಕುಳಿತುಬಿಡುತ್ತಿದ್ದರು. ಕೊರಗಿನಿಂದ ಆರೋಗ್ಯ ಕೆಡಬಹುದು ಅಂತ ಆನಂದನ ಭಯವಾಗಿತ್ತು. ಒಂದು ದಿನ ಇಂಗ್ಲೆಂಡಿನಿಂದ ಇವರ ಮಗ ವಾಮನ ಫೋನ್ ಮಾಡುತ್ತಾನೆ. ಮನೆಯಲ್ಲಿ ಪಾಲು ಕೇಳುತ್ತಾನೆ. ದೇಶ್ವಂತರಿಗೆ ಆಘಾತವಾಗುತ್ತದೆ. ಅದಾಗಿ ಜನಪ್ರಿಯ ಪತ್ರಿಕೆಯೊಂದರಲ್ಲಿ ಪ್ರಾಚೀನ ಕಟ್ಟಡಗಳ ಬಗ್ಗೆ ಲೇಖನ ಬರುತ್ತದೆ. ಅದರಲ್ಲಿ ಈ ಭವನದ ಬಗ್ಗೆಯೂ ಉಲ್ಲೇಖವಿರುತ್ತದೆ.

ಒಂದೊಂದು ಪೆಟ್ಟಿಗೆ ಕೊಟ್ಟರು. ಮತ್ತೆರಡು ಪ್ಯಾಕೆಟ್ಟುಗಳನ್ನು ಗಂಡಸರಿಗೆ ಕೊಟ್ಟು ‘ಹೋಗಿ ಬನ್ನಿ, ಮತ್ತೆ ಭೆಟ್ಟಿಯಾಗೋಣ’ ಅಂತ ನುಡಿದರು. ಸಂಭ್ರಾಂತಿ ತುಂಬಿ, ಕೈಮುಗಿದು ಹೊರಬಂದವರು ಮಾತಿಲ್ಲದವರಾಗಿದ್ದರು. ಹೆಂಡತಿಯರಿಗೆ ಬೆಲೆಬಾಳುವ ರೇಶ್ಮೆ ಸೀರೆಯಾದರೆ, ಗಂಡಸರಿಗೆ ಡಿವೈನ್ ಫೈಬರ್ ಶರ್ಟುಗಳಿದ್ದವು.

ಎಲ್ಲರು ಮೆಟಾಡರುಗಳಲ್ಲಿ ಕುಳಿತಾಗಿತ್ತು. ಮ್ಯಾನೇಜರ್ ಇವರಿಗಾಗಿ ಕಾಯುತ್ತಿದ್ದ. ‘ಮೇಡಂ ತುಂಬ ಒಳ್ಳೆಯವರು. ಆದರೆ, ಧಾರ್ಮಿಕರಿದ್ದಂತೆ ತುಂಬಾ ಸಂಪ್ರದಾಯ ಮನೋಭಾವದವರು ಸಹ. ಅಂದರೆ ಜಾತಕ, ಗ್ರಹಗತಿ, ಕೊನೆಗೆ ಚಿಕ್ಕಚಿಕ್ಕ ಶಕುನಗಳನ್ನು ಸಹ ಗಂಭೀರವಾಗಿ ತಗೋತಾರೆ. ನಿಮ್ಮನ್ನು ಕಂಡು ಏನೋ ಅನಿಸಿರಬೇಕು, ಕರೆಸಿದಾರೆ. ಎಲ್ಲರು ಬಂದಾಯಿತು. ಸರಿ, ಹೊರಡೋಣ’ ಅಂತ ಚಾಲಕನಿಗೆ ಸೂಚನೆ ಕೊಟ್ಟ.

ವ್ಯವಹಾರಕ್ಕೆ ಆಸ್ತಿ ಕೊಡತೀರಂತೆ ಅಂದದ್ದು ಗೊಂದಲ ಹುಟ್ಟಿಸಿತ್ತು. ರೆಸಾರ್ಟಿನಲ್ಲಿ ಶಾಂತಾರಾಮ ಕೇಳಿದ: ‘ಸಾಧನಾ ಬೆಹನ್ ಗಂಡನ ಹೆಸರು ಗೊತ್ತಾಗಲಿಲ್ಲ?...’

‘ಲಾಲಕಿಶೋರ್ ಬಿಕಾನೇರಿ, ಕೇಳಿಲ್ವ? ದೇಶ ವಿದೇಶದಲ್ಲೆಲ್ಲಾ ವ್ಯವಹಾರ ಹಬ್ಬಿದೆ.’

‘ಡಿವೈನ್ ಫೈಬರ್, ಯಾವ ಕಂಪನಿ ಉತ್ಪನ್ನ ನಿಮಗೇನಾದ್ರು ಗೊತ್ತಾ?’ ಮತ್ತೊಂದು ಪ್ರಶ್ನೆ ಕೇಳಿದ.

‘ಮತ್ಯಾರದ್ದು? ಬಿಕಾನೇರಿ ಒಡೆತನದ್ದೆ. ಜನಪ್ರಿಯ, ಅಷ್ಟೇ ದುಬಾರಿ ಬ್ರಾಂಡು!’ ಇದೆಂತಾ ಪ್ರಶ್ನೆ ಅನ್ನುವಂತೆ ಅವನತ್ತ ನೋಡಿದ.

***

ದೇಶ್ವಂತರು ಅರಮನೆಯ ಗುಪ್ತ ನಿರೂಪವನ್ನು ಮತ್ತೆ ಮತ್ತೆ ಓದಿದರು. ಯುವರಾಣಿಯನ್ನು ಸರೋವರದ ಅರಮನೆಯಿಂದ ಸ್ಥಳಾಂತರಿಸುವಲ್ಲಿ ರಾಜವೈದ್ಯರು ಸಂಗಡವಿರಬೇಕು ಅಂತ ಆ ಓಲೆಯಲ್ಲಿತ್ತು. ಮತ್ತೊಂದು ಓಲೆಯನ್ನು ತೆಗೆದುಕೊಂಡರು. ಯಾವುದೋ ಯಾತ್ರಿಗಳ ಛತ್ರದ ಉಲ್ಲೇಖವಿತ್ತು. ಈಗಿನ ಕನ್ನಡದಲ್ಲಿ ಹೇಳುವುದಾದರೆ ಹೊಳೆಛತ್ರ ಅಂತಾಗುತ್ತಿತ್ತು. ಪ್ರವಾಸಿಗಳಿಗಾಗಿ ಹೊಳೆಛತ್ರದ ಬದಲಿ ವ್ಯವಸ್ಥೆ ಮಾಡಿ, ತಕ್ಷಣ ಹೊಳೆಛತ್ರವನ್ನು ಯುವರಾಣಿಗೆ ಅರಮನೆಯಾಗಿ ತಾತ್ಕಾಲಿಕ ವ್ಯವಸ್ಥೆಯಾಗಬೇಕು. ಅಲ್ಲದೆ ಆರೋಗ್ಯದ ಸತತ ನಿಗಾ ವಹಿಸಲು, ರಾಜವೈದ್ಯರು ಆ ಮನೆಗೇ ವಾಸ್ತವ್ಯ ಬದಲಿಸಬೇಕು ಅನ್ನುವಂತೆ ಆದೇಶವಿತ್ತು. ಮೂರನೆಯ ಓಲೆಯನ್ನು ಓದಿದರು. ರಾಜವೈದ್ಯರು ಅರಸು ವಂಶಕ್ಕೆ ಸಲ್ಲಿಸಿದ ವಿಶೇಷ ಸೇವೆಗೆ ಮೆಚ್ಚಿ, ಹೊಳೆಛತ್ರದ ಭವನವನ್ನು ಅವರಿಗೇ ಬಹುಮಾನವಾಗಿ ನೀಡಿದ ದಾನಪತ್ರ ಅದಾಗಿತ್ತು. ಜೊತೆಗೆ ಕೃಷಿಯೋಗ್ಯ ಭೂಮಿಯನ್ನು ಕೊಟ್ಟ ಉಲ್ಲೇಖವಿತ್ತು. ಮತ್ತೊಂದನ್ನು ಓದತೊಡಗಿದವರಿಗೆ ಕೈ ಗಡಗಡ ನಡುಗಿತು! ವಂಶ ಮರ್ಯಾದೆಯನ್ನು ಕಾಪಿಟ್ಟ ಕತ್ತಿಯನ್ನು ಕಾರಣರಾದ ರಾಜವೈದ್ಯರಿಗೆ ಮರ್ಯಾದೆಯಾಗಿ ಕೊಟ್ಟ ಬಹುಮಾನ ಪತ್ರವಾಗಿತ್ತು.

ಭಯಂಕರ ಗೊಂದಲದಲ್ಲಿ ಅರ್ಥ ಮಾಡಿಕೊಳ್ಳಲಾಗದೆ ಯೋಚಿಸುತ್ತ ಕುಳಿತರು. ಇವೆಲ್ಲ ಒಂದಕ್ಕೊಂದು ಸಂಬಂಧವಿದ್ದುದಕ್ಕೇ ಒಂದೇ ಕಡೆ ಎಲ್ಲ ಪತ್ರಗಳಿವೆ ಅನ್ನುವ ತರ್ಕ ಹೊಳೆಯುತ್ತಿತ್ತು. ತಮ್ಮ ಈ ಭವನ ಹೊಳೆಗೆ ಹತ್ತಿರದಲ್ಲಿದೆ ಅನ್ನುವ ಅಂಶ ಸ್ಫುರಿಸಿತು. ಅಂದರೆ, ಇದನ್ನೇ ಹೊಳೆಛತ್ರ ಅಂತ ಉಲ್ಲೇಖಿಸಿದ್ದು! ಇಲ್ಲಿಗೆ ಒಬ್ಬ ಯುವರಾಣಿಯನ್ನು ಚಿಕಿತ್ಸೆಗೆ ಅಂತ ತರಾತುರಿಯಲ್ಲಿ ಕರೆತಂದರು. ಅದಕ್ಕಾಗಿ, ಪರಸ್ಥಳಗಳಿಂದ ಬರುವ ಪ್ರಯಾಣಿಕರು ತಂಗಲು ಬಳಕೆಯಾಗುತ್ತಿದ್ದ ಛತ್ರವನ್ನೆ ಬೇರೆ ಕಡೆ ಸ್ಥಳಾಂತರಿಸಲಾಯಿತು. ಈ ಕಟ್ಟಡ ಊರಿಂದ ಹೊರಗಿತ್ತು. ಯುವರಾಣಿಯ ಅರಮನೆ, ಬಹುಶಃ ಕೆರೆದಂಡೆಯ ಮೇಲಿನ ಈಗಿರುವ ಅವಶೇಷದ್ದಾಗಿರಬಹುದೇನೊ ಅಥವಾ ಮೊದಲು ಅಲ್ಲೆ ಮತ್ತೆಲ್ಲಾದರು ಇತ್ತೋ. ಅದಕ್ಕಿದು ಹತ್ತಿರವಾದ್ದಕ್ಕೆ ಹೊರಗಿಂದ ಹೊರಗೇ ಕೆಲಸ ಸಾಗಿಸಬಹುದು ಅನ್ನುವುದು ಹೊಳೆಯಿತು. ತಮ್ಮ ಪೂರ್ವಜ ರಾಜವೈದ್ಯರೊಬ್ಬರು ರಾಜಕುಮಾರಿಗೆ ಚಿಕಿತ್ಸೆ ಕೊಡಲೆಂದೇ ಈ ಕಟ್ಟಡಕ್ಕೆ ವಾಸಿಸಲು ಬರಬೇಕಾಯಿತು. ಅಂತಹ ಕಾಯಿಲೆ ಏನಿದ್ದೀತು ಅನ್ನುವ ಪ್ರಶ್ನೆ ತಲೆತಿನ್ನತೊಡಗಿತು. ಆಮೇಲೆ, ಈ ಕಟ್ಟಡವನ್ನು ವೈದ್ಯರಿಗೇ ಬಹುಮಾನವಾಗಿ ಕೊಟ್ಟರು. ಚಿಕಿತ್ಸೆ ಮಾಡಲೆಂದೇ ಅರಮನೆಯ ಊಳಿಗದಲ್ಲಿದ್ದವರು. ಅದಕ್ಕೆ ಅಂತಹ ಬಹುಮಾನವೇಕೆ? ವಂಶಮರ್ಯಾದೆಯನ್ನು ಒಂದು ಕತ್ತಿ ಕಾಪಾಡಿತು. ಅದನ್ನೂ ವೈದ್ಯರಿಗೇ ಬಹುಮಾನ ನೀಡುತ್ತಾರೆ. ವೈದ್ಯರು ಖಡ್ಗವನ್ನೇಕೆ ಬಳಸಿದರು? ವಂಶದ ಮರ್ಯಾದೆ ಅಂದರೇನರ್ಥ? ಏನೋ ಅಪ್ರಿಯವಾದುದನ್ನೆ ಮನಸು ತರ್ಕಿಸತೊಡಗಿತು. ದೂರದಲ್ಲೆಲ್ಲೊ ಕೋಳಿ ಕೂಗಿದ್ದು ಕೇಳಿಸಿತು. ಬೆಳಗಿನ ಜಾವವಾಗಿ ಹೋಗಿತ್ತು. ಅಲ್ಲಿಂದೆದ್ದು ಹಾಸಿಗೆಗೆ ಹೋಗಿ ಮಲಗಿದರು.

***

ಪಾಂಡುರಂಗ ಮತ್ತು ಶಾಂತಾರಾಮ ಮಂದಿರದಲ್ಲಿಯ ಘಟನೆಯಿಂದ ತೀವ್ರ ಪ್ರಭಾವಿತರಾಗಿದ್ದರು. ಬೆಳಗ್ಗೆ ಅದೇ ಮಾತಾಡುತ್ತ ಕುಳಿತಿದ್ದರು. ಅವರ ಹತ್ತುಪಟ್ಟು ಪ್ರಭಾವ ಅವರ ಹೆಂಡಂದಿರ ಮೇಲಾಗಿತ್ತು. ಅಂತಹ ಬೃಹತ್ ಉದ್ಯಮಿಯ ಹೆಂಡತಿ, ಅಷ್ಟೊಂದು ಆತ್ಮೀಯತೆಯಿಂದ ನಡೆಸಿಕೊಂಡು ಉಡುಗೊರೆ ಕೊಟ್ಟಿದ್ದು ಜೀವನದ ಮಹತ್ತರ ಘಟನೆಯಾಗಿತ್ತು. ಬಿಕಾನೇರಿಯನ್ನಾಗಲಿ ಅವರ ಮನೆಯವರನ್ನಾಗಲಿ ಇವರ್ಯಾರು ನೋಡಿರಲಿಲ್ಲ. ಅವರ ನೌಕರರಲ್ಲಿ ಯಾರೋ ಕೆಳಸ್ತರದವರು ಇವರನ್ನು ಸಂಪರ್ಕಿಸಿದ್ದಷ್ಟೆ. ಅದೂ ವ್ಯವಹಾರಕ್ಕೆ ಸಂಬಂಧಿಸಿದ್ದು ಬಿಟ್ಟರೆ, ವ್ಯಕ್ತಿಗತವಾದ ವಿಷಯಗಳೇನು ಇರಲಿಲ್ಲ. ತಮ್ಮ ಆಸ್ತಿ ಅವರ ಉದ್ಯಮದಲ್ಲಿ ಭಾಗಿಯಾಗುತ್ತದೆ ಅನ್ನುವುದಕ್ಕೆ ಅವರು ಇಷ್ಟೊಂದು ಮರ್ಯಾದೆ ಕೊಟ್ಟರು. ಅಷ್ಟಕ್ಕೂ ತಾವೇನೂ ಪುಕ್ಕಟೆ ಕೊಡುತ್ತಿಲ್ಲ. ಅಲ್ಲೆಲ್ಲೂ ಸಿಗದ ದೊಡ್ಡ ಮೊತ್ತವನ್ನೆ ಕೊಟ್ಟು